# ಹಾಯ್ಕುಗಳು



ಡಾ. ಸಿ. ರವೀಂದ್ರನಾಥ್

ಕಲೆ: ಎಂ.ಎಸ್. ಮೂರ್ತಿ

ಕಾಯುತ್ತಿದ್ದೇನೆ ಶಬರಿಯಂತೆ
ಗಾಂಧಿಯ ಕೊನೆಯುಸಿರಿನ ಜೊತೆ
ಹೊರಟುಹೋದ ರಾಮ
*
ಗಾಂಧಿ
ಹಸಿರು ಗರಿಕೆ ಇಬ್ಬನಿ
ಅಲ್ಲಲ್ಲಿ ಉದುರಿದ ತುಂಬೆ
*
ಪಾತಾಳಗರಡಿಗೆ ಸಿಕ್ಕ
ಮೂರು ಚೂರು
ಮಹಾತ್ಮ
*
ಏನೋ ಉಳಿದಿದೆ ತಳದಲ್ಲಿ
ಕೊನೆಯ ಹನಿ
ಗಾಂಧಿ
*
ನಾಥೂರಾಮನಿಂದ ತಪ್ಪಿಸಿಕೊಂಡ ಗುಂಡು
ಗಾಂಧಿಯ ಸ್ಪರ್ಶದಿಂದ
ಹೇ ರಾಮ್
*
ಈ ಸಂಜೆ
ಜೊತೆಯಲ್ಲಿ
ಗಾಂಧಿ ಬುದ್ಧ ಅಲ್ಲಮ ರಾಮ

